ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 526/2022 | | | |
| | ಪಿ.ಡಬ್ಲೂಃ | 2 | ಸಿಡಬ್ಲೂಃ | 2 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 31.07.2023 | | | |
| ಸಾಕ್ಷಿದಾರರ ಹೆಸರುಃ | ಹುಸೇನಸಾಬ ತಂದೆ ಇಮಾಮಸಾಬ ಕಲಕೇರಿ | | | |
| ವಯಸ್ಸುಃ | 60 ವರ್ಷ, | | | |
| ಉದ್ಯೋಗಃ | ವ್ಯವಸಾಯ | | | |
| ವಾಸಸ್ಥಳಃ | ಕೊರ್ಲಹಳ್ಳಿ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನನಗೆ ಆರೋಪಿತರ ಪರಿಚಯ ಇರುತ್ತದೆ. ಚಾಸಾ 1, 3 ರಿಂದ 11 ರವರ ಪರಿಚಯ ಇರುತ್ತದೆ. ಈಗ ನನಗೆ ತೋರಿಸಿದ ನಿಪಿ 1 ಮತ್ತು 2 ಛಾಯಾಚಿತ್ರ ಗಳನ್ನು 2 ಘಟನಾ ಸ್ಥಳಗಳಲ್ಲಿ ತೆಗೆದಿದ್ದು, ಅದರಲ್ಲಿ ಕಾಣುವ 4 ನೇ ವ್ಯಕ್ತಿ ನಾನೇ ಇರುತ್ತೇನೆ. ನನ್ನ ಜೊತೆ ಚಾಸಾ 1 ಮತ್ತು 3 ರವರು ಇದ್ದರು. ಚಾಸಾ 1 ರವರು ಘಟನಾ ಸ್ಥಳವನ್ನು ತೋರಿಸಿದ್ದರ ಮೇರೆಗೆ ಪೋಲಿಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಸದರಿ ಘಟನಾ ಸ್ಥಳದ ಪಂಚನಾಮೆ 2 ವರ್ಷಗಳ ಹಿಂದೆ ಮುಂಜಾನೆ 7 ಗಂಟೆಯಿಂದ 9 ಗಂಟೆಯವರೆಗೆ ಜರುಗಿಸಿದ್ದರು.

2. ಸದರಿ ಘಟನಾ ಸ್ಥಳವು ಬಯಲು ಜಾಗೆ ಮತ್ತು ಇನ್ನೊಂದು ಅಲ್ಲೇ ಪಕ್ಕದ ಬಯಲು ಜಾಗೆಯಾಗಿದ್ದವು. ಚಾಸಾ 1 ರವರ ಮನೆಯಲ್ಲಿ ನಾನು ರೂ. 25,000/- ನೀಡಿ ಬಾಡಿಗೆ ಇದ್ದುದರಿಂದ ನನಗೆ ಅವರ ಪರಿಚಯ ಇರುತ್ತದೆ. ನನ್ನ ನಂತರ ಸದರಿ ಮನೆಯಲ್ಲಿ ಚಾಸಾ 11 ರವರು ಬಾಡಿಗೆ ಇರುತ್ತಾರೆ. ಚಾಸಾ 11 ರವರ ನಂತರ, ಚಾಸಾ 1 ರವರು ಸದರಿ ಮನೆಯನ್ನು ಬಳಸಿಕೊಂಡು ಬಂದಿರುತ್ತಾರೆ. ಚಾಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿದ್ದರ ಕುರಿತು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರು ಅನುಮತಿ ಕೇಳಿದ್ದು ಅನುಮತಿಸಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದಃ**

1. ದಿಃ 16.12.2021 ರಂದು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಚಾಸಾ 1 ರವರ ಮನೆ ಮುಂದೆ ಹಾಗೂ ಬಸವಣ್ಣ ದೇವರ ದೇವಸ್ಥಾನದ ಮುಂದೆ ಇರುವ ಸಾರ್ವಜನಿಕ ರಸ್ತೆಯ ಮೇಲೆ ಚಾಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿದ್ದರ ಕುರಿತು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 1 ಮತ್ತು ಅವರ ಸಹೋದರರ ಹೆಸರಿಗೆ ಮುಸ್ಲಿಂ ಓಣಿಯಲ್ಲಿ ಆಸ್ತಿ ನಂ. 565 ಎ ಅಂತಾ ಮನೆ ಇತ್ತು ಎಂದರೆ ಸರಿ. ಸದರಿ ಮನೆಯು ನಮ್ಮದು ಅಂತಾ ಚಾಸಾ 1 ಮತ್ತು ಆರೋಪಿತರ ನಡುವೆ ಆಗಾಗ ಜಗಳ ಆಗುತ್ತಿತ್ತು ಎಂದರೆ

ಸರಿ. ದಿಃ 12.12.2021 ರಂದು ಮುಂಜಾನೆ 6 ರಿಂದ 6.45 ಗಂಟೆಯ ಒಳಗಡೆ ಆರೋಪಿತರು ಜೆ ಸಿ ಬಿ ಸಹಾಯದಿಂದ ಮನೆಯನ್ನು ಕೆಡವುತ್ತಿದ್ದರು, ಆಗ ಚಾಸಾ 1 ರವರು ಸದರಿ ಕುರಿತು ಕೇಳಿದಾಗ, ಆರೋಪಿತರು ಅವರಿಗೂ ಮತ್ತು ಚಾಸಾ 1 ರವರ ಸಹೋದರರಿಗೂ ಅವಾಚ್ಯ ಶಬ್ದಗಳಿಂದ ಬೈದು, ಅವರನ್ನು ಅಡ್ಡಗಟ್ಟಿ ನಿಲ್ಲಿಸಿದ್ದರು ಮತ್ತು ಸದರಿ ಕೃತ್ಯದಿಂದ ಚಾಸಾ 1 ರವರಿಗೆ 3 ಲಕ್ಷ ರೂ.ಗಳಷ್ಟು ಹಾನಿಯಾಗಿದ್ದು, ನನಗೆ ಕೇಳಿ ಗೊತ್ತಾಯಿತು.

2. ಅದೇ ದಿನ, ಸದರಿ ವಿಷಯದ ಕುರಿತು ಸಂಜೆ 5 ಗಂಟೆಗೆ ಬಸವಣ್ಣನ ದೇವಸ್ಥಾನದ ಹತ್ತಿರ ಹಿರಿಯರು ಕೂಡಿದ್ದರು, ಆರೋಪಿತರು ಪುನಃ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ, ಕೈಯಿಂದ ಹೊಡಿ ಬಡಿ ಮಾಡಿ, ಜೀವದ ಬೆದರಿಕೆ ಹಾಕಿದ್ದರ ಕುರಿತು ನಾನು ಕೇಳಿ ತಿಳಿದುಕೊಂಡಿದ್ದೆ ಎಂದರೆ ಸರಿ. ಸದರಿ ಘಟನೆ ಸಾಯಂಕಾಲ 5.30 ಕ್ಕೆ ಆಗಿತ್ತು ಎಂದರೆ ಸರಿ.  ಸದರಿ ಕುರಿತು ಚಾಸಾ 1 ರವರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಯು.ಸಿ.ಹೆಚ್.ವಕೀಲರಿಂದಃ**

1. ವಿ ಪಿ ಸಿ ನಂ. 565/ಅ ಮನೆ ಮುಸ್ಲಿಂ ಓಣಿಯಲ್ಲಿದೆ ಎಂದರೆ ಸರಿ.  ಆರೋಪಿತರ ಮನೆ ಕುಂಬಾರ ಓಣಿಯಲ್ಲಿದೆ ಎಂದರೆ ಸರಿ.  ಕುಂಬಾರ ಓಣಿಗೂ ಮತ್ತು ಮುಸ್ಲಿಂ ಓಣಿಗೂ 100 ಮೀ ಅಂತರ ಇದೆ ಎಂದರೆ ಸರಿ. ನನಗೆ ಓದಲೂ ಮತ್ತು ಬರೆಯಲು ಬರುವುದಿಲ್ಲ.  ನಿಪಿ 5 ರಲ್ಲಿ ಏನು ಬರೆದಿದೆ ಅಂತಾ ನನಗೆ ಗೊತ್ತಿಲ್ಲ.  ನಿಪಿ 1 ಮತ್ತು 2 ನ್ನು ತೆಗೆದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಛಾಯಾಚಿತ್ರಗಳನ್ನು ಮೊಬೈಲ್‌ನಿಂದ ತೆಗೆದಿರುತ್ತಾರೆ.  ಆದರೆ ಯಾರ ಮೊಬೈಲ್ ಅಂತಾ ನನಗೆ ಗೊತ್ತಿಲ್ಲ.  ಛಾಯಾಚಿತ್ರಗಳನ್ನು ತೆಗೆಯಲು ಯಾರೂ ಹೇಳಿರಲಿಲ್ಲ. ಅವರೇ ತೆಗೆದಿರುತ್ತಾರೆ.

2. ನನ್ನನ್ನು ಮತ್ತು ಚಾಸಾ 3 ರವರನ್ನು ಚಾಸಾ 1 ರವರು ಕರೆದಿದ್ದರು.  ನಾನು ಆವಾಗ ಬಸವಣ್ಣ ದೇವರ ಗುಡಿಯ ಹತ್ತಿರ ಇದ್ದೆನು.  ಮೊದಲನೇ ಛಾಯಾಚಿತ್ರ ಮನೆಯ ಹತ್ತಿರ ಮತ್ತು ಎರಡನೇ ಛಾಯಾಚಿತ್ರ ಬಸವಣ್ಣ ದೇವರ ಗುಡಿಯ ಹತ್ತಿರ ತೆಗೆದಿರುತ್ತಾರೆ.  ಈ ಕುರಿತು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪೋಲಿಸರು ಬೆಳಗ್ಗೆ 8 ಗಂಟೆಗೆ ಬಂದಿದ್ದರು.  ಸದರಿ ಛಾಯಾಚಿತ್ರಗಳನ್ನು ತೆಗೆದ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ.  ಎರಡು ಬಯಲು ಜಾಗೆಗಳು ಚಾಸಾ 1 ರವರಿಗೆ ಸೇರಿದ್ದು ಇರುತ್ತವೆ.  ಸದರಿ ಕುರಿತು ನಾನು ಯಾವುದೇ ದಾಖಲೆ ನೋಡಿರುವುದಿಲ್ಲ.

3. ನಾನು ಚಾಸಾ 1 ರವರ ಬಾಡಿಗೆ ಇದ್ದ ಮನೆ ಸಂಖ್ಯೆ ಹೇಳಲು ಬರುವುದಿಲ್ಲ.  ಯಾವ ಇಸ್ವಿಯಲ್ಲಿ ನಾವು ಅಲ್ಲಿ ಬಾಡಿಗೆ ಇದ್ದೆವು ಅಂತಾ ಹೇಳಲು ಬರುವುದಿಲ್ಲ,  ಆದರೆ 2 ವರ್ಷಗಳ ಕಾಲ ಬಾಡಿದೆ ಇದ್ದೆವು. ಬಾಡಿಗೆ ಇದ್ದ ಕುರಿತು ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಹಾಜರುಪಡಿಸಿರುತ್ತೇನೆ. ಈ ರೀತಿಯಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಿಪಿ 5 ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ.  ಆದರೆ ನಮ್ಮ ಊರಿನಲ್ಲಿ ಬರೆದಿರುತ್ತಾರೆ.  ನಾನು ಸಹಿ ಮಾಡಿದಾಗ ಅದು ಬಿಳಿ ಹಾಳೇ ಇತ್ತು.  ಬೆರಳಚ್ಚು ಮಾಡಿರಲಿಲ್ಲ.  5-6 ವರ್ಷಗಳಿಂದ ಆರೋಪಿತರು ಮತ್ತು ಚಾಸಾ 1 ರವರ ನಡುವೆ ಜಗಳವಾಗುತ್ತಿತ್ತು.  ಈ ರೀತಿಯಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.  ಈ ಕುರಿತು ನನಗೆ ಯಾರೂ ವಿಚಾರಿಸಿಲ್ಲ. ಈ ವಿಚಾರವಾಗಿ ನಾನು

ಯಾರ ಮುಂದೆಯೂ ಹೇಳಿಕೆ ನೀಡಿಲ್ಲ ಎಂದರೆ ಸರಿ. ನನ್ನ ಮನೆ ಮಸೀದಿಯ ಓಣಿಯಲ್ಲಿ ಬರುತ್ತದೆ. ಘಟನಾ ಸ್ಥಳದಿಂದ ನನ್ನ ಮನೆ 100 ಮೀ ಅಂತರದಲ್ಲಿರುತ್ತದೆ. ಬಯಲು ಜಾಗೆಯಲ್ಲಿ ಆರೋಪಿತರು 6-7 ವರ್ಷಗಳಿಂದ ತಿಪ್ಪೆ ಹಾಕುತ್ತಿದ್ದರು ಎಂದರೆ ಸರಿ. ಆರೋಪಿತರು ತಿಪ್ಪೆಯಲ್ಲಿದ್ದ ಗೊಬ್ಬರವನ್ನು ಜೆ ಸಿ ಬಿ ಸಹಾಯದಿಂದ ತೆಗೆಯುತ್ತಿದ್ದರು ಎಂದರೆ ಸರಿ. ಆರೋಪಿತರಿಗೆ ಸೇರಿದ ತಿಪ್ಪೆಯ ಸುತ್ತ ಇದ್ದ 3-4 ಅಡಿ ಎತ್ತರದ ಕಲ್ಲಿನ ಗೋಡೆಯನ್ನು ಕೆಡವುತ್ತಿದ್ದರು. ಇದನ್ನು ಹೊರತುಪಡಿಸಿ, ಆರೋಪಿತರು ಯಾರ ಮನೆ ಗೋಡೆಯನ್ನು ಕೆಡವಿರುವುದಿಲ್ಲ. ಈ ಕುರಿತು ಆರೋಪಿತರು ಚಾಸಾ 1 ಮತ್ತು ಆತನ ಸಹೋದರರಿಗೆ ಬೈದಾಡಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ. ಅಲ್ಲಿ ಯಾರೂ ಯಾರಿಗೂ ಅಡ್ಡಗಟ್ಟಿರಲಿಲ್ಲ. ಆರೋಪಿತರ ಕೃತ್ಯದಿಂದ ರೂ.3 ಲಕ್ಷ ನಷ್ಟವಾಯಿತು ಅಂತಾ ನನಗೆ ಚಾಸಾ 1 ರವರು ಹೇಳಿದ್ದು ಸುಳ್ಳು ಇದೆ ಎಂದರೆ ಸರಿ ಅಲ್ಲ. ಜಗಳದ ಕುರಿತು ಸಾಯಂಕಾಲ ಎಲ್ಲಿಯೂ, ಪಂಚಾಯ್ತಿ ಆಗಿಲ್ಲ ಎಂದರೆ ಸರಿ. ಯಾರಿಗೆ ಯಾರೂ ಹೊಡಿ ಬಡಿ ಮಾಡಿರುವುದಿಲ್ಲ. ಜೀವದ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ.

4. ಈ ದಿನ ನನ್ನನ್ನು ಚಾಸಾ 1 ರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿ. ಚಾಸಾ 1 ರವರು ತಮ್ಮ ಪರವಾಗಿ ಸಾಕ್ಷಿ ನುಡಿಯಲು ನನ್ನನ್ನು ಹೇಳಿ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.